# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂ.769/2015

ಸಿಡಬ್ಲ್ಯೂ-6 ಪಿಡಬ್ಲ್ಯೂ-1

| | |
|---|---|
| ಹೆಸರುಃ | ಬಾಬು |
| ತಂದೆಯ ಹೆಸರುಃ | ರಾಮಚಂದ್ರ |
| ವಯಸ್ಸುಃ | 45 ವರ್ಷ |
| ಉದ್ಯೋಗಃ | ವೆಲ್ಡಿಂಗ್ ಕೆಲಸ |
| ವಾಸ ಸ್ಥಳಃ | ಸೇಡಂ |

ದಿನಾಂಕ 26-05-2022

ಪ್ರಮಾಣ ವಚನ ಬೋಧಿಸಲಾಯಿತು.

## <u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>

ಅಭೀಲಾಶ ಇವರು ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಅಪಘಾತವು ಜಿ.ಕೆ. ರಸ್ತೆಯ ನಮ್ಮ ಗ್ಯಾರೇಜಿನ ಮುಂದೆ ಆಗಿತ್ತು. ಅಪಘಾತವನ್ನು ನಾನು ಕಣ್ಣಾರೆ ಕಂಡಿರುತ್ತೇನೆ. ಈಗ 6 ವರ್ಷಗಳ ಹಿಂದೆ ಅಭೀಲಾಶ ಇವರು ಗಣಪತಿ ದೇವರನ್ನು ನೋಡಿ 09.00 ಗಂಟೆಗೆ ರಸ್ತೆಯ ಮೇಲೆ ಬರುತ್ತಿರುವಾಗ ಒಂದು ಮೋಟಾರ ಸೈಕಲ್ ವಿಸಿಎಫ್ ಫ್ಯಾಕ್ಟರಿ ಕಡೆಯಿಂದ ಜೋರಿನಿಂದ ಬರುತ್ತಿತ್ತು ಮತ್ತು ಅದು ಅಭೀಲಾಶ ಇವರಿಗೆ ಹಾಯಿಸಿ ಅಪಘಾತಪಡಿಸಿತ್ತು. ಆಗ ಅಭೀಲಾಶ ಇತನಿಗೆ ತಲೆಗೆ ಪೆಟ್ಟಾಗಿತ್ತು ಕಿವಿಯಿಂದ ರಕ್ತ ಬರುತ್ತಿತ್ತು. ಆಗ ನಾನು ಮತ್ತು ಇತರರು ಸೇಡಂ ಸರಕಾರಿ ಆಸ್ಪತ್ರೆಗೆ ಸೇರಿಕೆ ಮಾಡಿರುತ್ತೇವೆ. ಆಗ ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಕಲಬುರಗಿಗೆ ತೆಗೆದುಕೊಂಡು ಹೋಗುತ್ತಿರುವಾಗ ಮಾರ್ಗ ಮಧ್ಯೆದಲ್ಲಿ ಅಭೀಲಾಶ ಮೃತಪಟ್ಟಿರುತ್ತಾನೆ. ಅಪಘಾತವು ಮೋಟಾರು ವಾಹನ ಚಾಲಕನ ತಪ್ಪಿನಿಂದ ಆಗಿರುತ್ತದೆ. ಬೈಕ ಸವಾರನನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. (ಆರೋಪಿ ಈ ದಿವಸ ಗೈರು ಹಾಜರಿದ್ದು ಆರೋಪಿಯ ಗುರುತುಪರಿಚಯದ ಕುರಿತು ಅವರ ಪರ ವಕೀಲರು ಆಕ್ಷೇಪಣೆ ಇರುವುದಿಲ್ಲ ಎಂದು ವಾದ ಮಂಡಿಸಿರುತ್ತಾರೆ.) ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆ ದಿವಸ ಅಪಘಾತಪಡಿಸಿದ ಬೈಕನ್ನು ನೋಡಿದ್ದಲ್ಲಿ ಗುರುತಿಸಲು ಆಗುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

## <u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>

ಅಪಘಾತ ದಿನಾಂಕ 20.09.2015 ರಂದು ಆಗಿರುತ್ತದೆ ಎಂದರೆ ಸರಿ. ಅಪಘಾತಪಡಿಸಿದ ಮೋಟಾರ ಸೈಕಲ ನಂ.KA-34-V4108 ಎಂದರೆ ಸರಿ. ಅಪಘಾತ ಆರೋಪಿ ಬೈಕನ್ನು ಅತೀ ಜೋರಿನಿಂದ ನಿಷ್ಕಾಳಜೀತನದಿಂದ ನಡೆದ್ದರಿಂದ ಆಗಿರುತ್ತದೆ ಎಂದರೆ ಸರಿ.

**<u>ಪಾಟೀ ಸವಾಲು: ಶ್ರೀ ಎ. ಎಮ್. ಆರೋಪಿ ಪರ ವಕೀಲರಿಂದ</u>**

ನನ್ನದು ಕಳೆದ 8–10 ವರ್ಷಗಳಿಂದ ವೆಲ್ಡಿಂಗ್ ಅಂಗಡಿ ಇರುತ್ತದೆ ಎಂದರೆ ಸರಿ. ನನ್ನ ಅಂಗಡಿಯ ಹತ್ತಿರ ಒಂದು ದೊಡ್ಡ ಮಗ ಇರುತ್ತದೆ ಎಂದರೆ ಸರಿ. ನಾನು ಯಾವಾಗಲೂ ಗಾಡಿಗೆ ವೆಲ್ಡಿಂಗ್ ಕೆಲಸ ಮಾಡುತ್ತಿರುತ್ತೇನೆ ಎಂದರೆ ಸರಿ. ನನ್ನ ಅಂಗಡಿಯ ಅಕ್ಕ–ಪಕ್ಕದಲ್ಲಿ ಬೇರೆ ಬೇರೆ ಅಂಗಡಿಗಳು ಸಹ ಇರುತ್ತವೆ ಎಂದರೆ ಸರಿ. ರೋಡಿನ ಆಚೆಬದಿಯಲ್ಲಿ ವೈನ್ ಶಾಪ ಮತ್ತು ಬೇರೆ ಬೇರೆ ಅಂಗಡಿಗಳು ಇರುತ್ತವೆ ಎಂದರೆ ಸರಿ. ರಸ್ತೆ ಸಾಕಷ್ಟು ವಾಹನ ದಟ್ಟನೆಯಿಂದ ಕೂಡಿರುತ್ತದೆ ಎಂದರೆ ಸರಿ. ಗಣೇಶ ನಗರದಿಂದ ಮತ್ತು ಸಾಯಿಬಾಬಾ ಕಾಲೋನಿಯಿಂದ ಮತ್ತು ನನ್ನ ಅಂಗಡಿಯ ಬದಿಯಿಂದ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ವಾಹನಗಳು ಸಾವಕಾಶವಾಗಿ ಬರುತ್ತವೆ ಎಂದರೆ ಸರಿಯಲ್ಲ. ಗುಲಬರ್ಗಾ ಕಡೆಗೆ ಸಾಗುವ ರಸ್ತೆಯಲ್ಲಿ ರೋಡ ಹಂಸ ಇರುತ್ತವೆ ಎಂದರೆ ಸರಿ. ಆದ್ದರಿಂದ ವಾಹನಗಳು ಸಾವಕಾಶವಾಗಿ ಬರುತ್ತವೆ ಎಂದರೆ ಸರಿ. ಉಡಗಿ ಕಡೆಯಿಂದ ಬರುವ ವಾಹನಗಳು ಸಹ ಸಾವಕಾಶವಾಗಿ ಬರುತ್ತವೆ ಎಂದರೆ ಸರಿ. ದ್ವಿಚಕ್ರ ವಾಹನ ಎಷ್ಟು ವೇಗ ಮತ್ತು ಹೇಗೆ ಬರುತ್ತಿತ್ತು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ನಾನು ನೋಡಿಲ್ಲ. ಸಾಕ್ಷಿ ವಾಹನ ಪ್ರತಿ ಗಂಟೆಗೆ 75 ಕಿ.ಮೀ. ವೇಗ ಇತ್ತು ಎಂದು ನುಡಿಯುತ್ತಾರೆ. ನಾನು ದ್ವಿಚಕ್ರ ವಾಹನದ ಸ್ಪಿಡೋಮಿಟರ್ ನೋಡಿಲ್ಲ ವಾಹನ ಯಾವ ಕಲರ್ ಹಾಗೂ ಅದರ ಪಾಸಿಂಗ್ ನಂಬರ ಯಾವುದು ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಪೊಲೀಸರು ನನಗೆ ವಾಹನದ ನಂಬರ ಬಗ್ಗೆ ಹೇಳಿಲ್ಲ ಮತ್ತು ಅದರ ಬಗ್ಗೆ ಹೇಳಿಕೆ ಪಡೆದುಕೊಂಡಿಲ್ಲ. ಅಪಘಾತ ಯಾವ ದಿನಾಂಕದಂದು ಆಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಯಾವ ದಿನಾಂಕ ಪಡೆದುಕೊಂಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ.

ಆ ದಿವಸ ನಾನು ಕೆಲಸ ಮಾಡುತ್ತಿರುವಾಗ ಒಬ್ಬ ಹುಡುಗ ನನ್ನಲ್ಲಿಗೆ ಬಂದಿದ್ದ. ಆ ಹುಡುಗ ಅಪಘಾತವಾದಾಗ ಸ್ಥಳಕ್ಕೆ ಬಂದಿರಲಿಲ್ಲ. ಅಪಘಾತವಾದ ನಂತರ ಸ್ಥಳದಲ್ಲಿ ಮೃತ ಅಭೀಲಾಶ ಇತನ ತಮ್ಮ ಮತ್ತು ತಾಯಿ ಬಂದಿದ್ದರು. ದಿನಾಂಕ 20.09.2015 ರಂದು ನಾನು ವೆಲ್ಡಿಂಗ್ ಕೆಲಸ ಮಾಡುತ್ತಿರುವಾಗ ದ್ವಿಚಕ್ರ ವಾಹನ ಅತೀ ಜೋರಿನಿಂದ ಮತ್ತು ನಿಷ್ಕಾಳಜೀತನದಿಂದ ಬಂದು ಅಭೀಲಾಶ ಇತನಿಗೆ ಹಾಯಿಸಿ ಅಪಘಾತಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನಗೆ ದ್ವಿಚಕ್ರ ವಾಹನವನ್ನು ತೋರಿಸಿಲ್ಲ. ನಾನು ಪೊಲೀಸರ ಮುಂದೆ ಮೊಟಾರ ಸೈಕಲ ನಂ.KA34 V4108 ಇತ್ತು ಎಂದು ಹೇಳಿಕೆ ನೀಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೃತ ಅಭೀಲಾಶ ಇತನ ಕುಟುಂಬಕ್ಕೆ ಪರಿಹಾರ ಹಣ ದೊರೆಯುವ ಉದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಗೂ ಆರೋಪಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

*SYH*

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ. ಸಿ. ನಂ.769/2015

ಸಿಡಬ್ಲ್ಯೂ-4 ಪಿಡಬ್ಲ್ಯೂ-2

| | |
|---|---|
| ಹೆಸರುಃ | ಶ್ರೀಮತಿ ಸರೋಜಾ |
| ಗಂಡನ ಹೆಸರುಃ | ವಾಸುದೇವ ಕಾಚೂರ |
| ವಯಸ್ಸುಃ | 43 ವರ್ಷ |
| ಉದ್ಯೋಗಃ | ಖಾನಾವಳಿ ಕೆಲಸ |
| ವಾಸ ಸ್ಥಳಃ | ತೆಲ್ಕೂರ ಗ್ರಾಮ |

ದಿನಾಂಕ 06-03-2023

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾಸಾ-1 ನನ್ನ ಗಂಡ ಇರುತ್ತಾರೆ. ಅಭೀಲಾಶ ನನ್ನ ಮಗ ಇರುತ್ತಾನೆ. ಅವರು ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಅಪಘಾತವು ಉಡಗಿ ರೋಡ ಆಕಾಶ ದಾಬಾ ಹತ್ತಿರ ಆಗಿತ್ತು. ನನ್ನ ಮಗ ಆಕಾಶ ದಾಬಾ ಮುಂದೆ ಕೂಡಿಸಿದ ಗಣೇಶನ ಮೂರ್ತಿಯನ್ನು ದರ್ಶನ ಮಾಡಲು ಹೋಗಿದ್ದು ಇತ್ತು. ಆಗ ವಾಸವದತ್ತಾ ಫ್ಯಾಕ್ಟರಿಯ ಕಡೆಯಿಂದ ಒಂದು ದ್ವಿಚಕ್ರ ವಾಹನ ರಸ್ತೆ ದಾಟುತ್ತಿದ್ದ ನನ್ನ ಮಗನಿಗೆ ಹಾಯಿಸಿ ಅಪಘಾತ ಮಾಡಿತ್ತು. ನಾನು ಅಪಘಾತ ಸ್ಥಳಕ್ಕೆ ಹೋಗಿ ನೋಡಿದ್ದು ನನ್ನ ಮಗನಿಗೆ ತಲೆಯ ಭಾಗಕ್ಕೆ ಪೆಟ್ಟಾಗಿತ್ತು, ಕಿವಿಯಿಂದ ರಕ್ತ ಬರುತ್ತಿತ್ತು. ಆಗ ನಾನು, ನನ್ನ ಸಂಬಂಧಿಕರಾದ ಶೋಭಾ, ಬಾಬು ಎಂಬುವವರು ಸ್ಥಳಕ್ಕೆ ಹೋಗಿ ನೋಡಿದ್ದು, ನನ್ನ ಮಗ ಮಾತನಾಡುತ್ತಿರಲಿಲ್ಲ. ಆಗ ಒಂದು ಆ್ಯಂಬುಲೆನ್ಸದಲ್ಲಿ ಹಾಕಿಕೊಂಡು ಸೇಡಂ ಸರಕಾರಿ ಆಸ್ಪತ್ರೆಗೆ ಉಪಚಾರಕ್ಕೆ ಸೇರಿಕೆ ಮಾಡಿರುತ್ತೇವೆ. ಆಗ ವೈದ್ಯಾಧಿಕಾರಿಗಳು ಹೆಚ್ಚಿನ ಚಿಕಿತ್ಸೆಗೆಗಾಗಿ ಕಲಬುರಗಿಗೆ ಆ್ಯಂಬುಲೆನ್ಸದಲ್ಲಿ ಕರೆದುಕೊಂಡು ಹೋಗುತ್ತಿರುವಾಗ ಮಳಖೇಡ ಹತ್ತಿರ ಬಂದಾಗ ನನ್ನ ಮಗ ತೀರಿಕೊಂಡಿರುತ್ತಾನೆ. ಸದರಿ ಅಪಘಾತದ ವಿಷಯವನ್ನು ನಾನು ಖಾನಾವಳಿ ನಡೆಸುತ್ತಿದ್ದು ಜನರು ಬಂದು ಹೇಳಿರುತ್ತಾರೆ. ದ್ವಿಚಕ್ರ ವಾಹನವನ್ನು ರಾಹುಲ ನಡೆಸುತ್ತಿದ್ದರು. ಆ ದ್ವಿಚಕ್ರ ವಾಹನದ ಮೇಲೆ ಮೂರು ಜನ ಕುಳಿತುಕೊಂಡು ಪಾಸ್ಟಾಗಿ ಬಂದು ಡಿಕ್ಕಿಪಡಿಸಿರುತ್ತಾರೆ. ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ. ಆರೋಪಿಯನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. (ಆರೋಪಿ ಈ ದಿವಸ ಗೈರು ಹಾಜರಿದ್ದು ಆರೋಪಿಯ ಗುರುತುಪರಿಚಯದ ಕುರಿತು ಅವರ ಪರ ವಕೀಲರು ಆಕ್ಷೇಪಣೆ ಇರುವುದಿಲ್ಲ ಎಂದು ವಾದ ಮಂಡಿಸಿರುತ್ತಾರೆ.) ಅಪಘಾತ ಯಾವ ದಿನಾಂಕದಂದು ಆಗಿರುತ್ತದೆ ಎಂದು ನೆನಪಿಲ್ಲ. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು**

**ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಅಪಘಾತ ದಿನಾಂಕ 20.09.2015 ರಂದು ಆಗಿರುತ್ತದೆ ಎಂದರೆ ನೆನಪಿಲ್ಲ. ಅಪಘಾತಪಡಿಸಿದ ಮೋಟಾರ ಸೈಕಲ ನಂ.KA-34-V-4108 ಎಂದರೆ ನನಗೆ ನೆನಪಿಲ್ಲ.

**<u>ಪಾಟೀ ಸವಾಲುಃ ಶ್ರೀ ಎ. ಎಮ್. ಆರೋಪಿ ಪರ ವಕೀಲರಿಂದ</u>**

ಅಪಘಾತ ಆಗಿದೆ ಎನ್ನಲಾದ ಸ್ಥಳದಲ್ಲಿ ಸಾಕಷ್ಟು ವಾಹನಗಳ ಓಡಾಟ ಇರುತ್ತದೆ ಎಂದರೆ ಸರಿ. ಆಕಾಶ ದಾಬಾದ ಮುಂದುಗಡೆ ರಸ್ತೆಯ ಮೇಲೆ ರೋಡ ಹಂಪ ಇರುತ್ತವೆ ಎಂದರೆ ನಾನು ನೋಡಿಲ್ಲ. ಆಕಾಶ ದಾಬಾದ ಮುಂದುಗಡೆ ರೋಡಿನ ಆ ಬದಿಯಿಂದ ಈ ಬದಿಗೆ ಮತ್ತು ಈ ಬದಿಯಿಂದ ಆ ಬದಿಗೆ ಜನರು ಓಡಾಡುತ್ತಾರೆ ಎಂದರೆ ಸರಿ. ಆದ್ದರಿಂದ ಅಲ್ಲಿ ವಾಹನಗಳು ಸಾವಕಾಶವಾಗಿ ಬರುತ್ತವೆ ಎಂದರೆ ಸರಿ. ನನ್ನ ಮಗ ಅಪಘಾತದಲ್ಲಿ ತೀರಿಕೊಂಡ ಬಗ್ಗೆ ಸೇಡಂ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು ಅದನ್ನು ಮರಳಿ ಪಡೆದುಕೊಂಡಿರುತ್ತೇವೆ. ಅಪಘಾತವಾದಾಗ ನಾನು ಖಾನಾವಳಿಯಲ್ಲಿ ಇದ್ದೆ ಎಂದರೆ ಸರಿ. ಅಪಘಾತ ಆರೋಪಿಯ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಪಾಸ್ಟದಿಂದ ವಾಹನ ಚಲಾಯಿಸಿ ನನ್ನ ಮಗನಿಗೆ ಡಿಕ್ಕಿಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿ ವಾಹನ ಚಲಾಯಿಸುತ್ತಿದ್ದನು ಮತ್ತು ಅವನ ತಪ್ಪಿನಿಂದಲೇ ಅಪಘಾತವಾಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೂ ಆರೋಪಿಗೂ ಏನು ಸಂಬಂಧ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

**SYH*

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ. ಸಿ. ನಂ.769/2015

ಸಿಡಬ್ಲ್ಯೂ-2 ಪಿಡಬ್ಲ್ಯೂ-4

| | |
|---|---|
| ಹೆಸರುಃ | ಶ್ರೀ ಚಂದ್ರಶೇಖರ |
| ತಂದೆಯ ಹೆಸರುಃ | ಮಲ್ಲಶೆಟ್ಟಿ |
| ವಯಸ್ಸುಃ | 61 ವರ್ಷ |
| ಉದ್ಯೋಗಃ | ವ್ಯಾಪಾರ |
| ವಾಸ ಸ್ಥಳಃ | ಸೇಡಂ |

ದಿನಾಂಕ 24-07-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆಯನ್ನು ನಿಪಿ-1 ಎಂದು ಗುರುತಿಸಲಾಗಿದ್ದು, ದಾಖಲೆಯ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯ ಮೇಲಿರುವ ಮಾಹಿತಿ ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆಯನ್ನು ನಿಪಿ-2 ಎಂದು ಗುರುತಿಸಲಾಗಿದ್ದು, ದಾಖಲೆಯ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಆರೋಪಿಯ ಪರಿಚಯ ನನಗೆ ಇಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 21.09.2015 ರಂದು ಬೆಳಗ್ಗೆ 10.00 ರಿಂದ 11.00 ರಗೆ ರಾಜ್ಯ ಹೆದ್ದಾರಿ ಸಂ.10 ರ ಸೇಡಂ-ಹೈದ್ರಾಬಾದ ಪಟ್ಟದ ಹತ್ತಿರ ಅಪಘಾತವಾಗಿದ್ದು ಅಪಘಾತ ಸ್ಥಳಕ್ಕೆ ಪೊಲೀಸರು ನನ್ನನ್ನು ಪಂಚರನ್ನಾಗಿ ಬರಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಒಂದು ಮೋಟಾರ ಸೈಕಲ ನಂ. ಕೆಎ-34/ವಿ 4108 ವಾಹನವನ್ನು ನನ್ನ ಸಮಕ್ಷಮ ಪೊಲೀಸರು ಜಪ್ತಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 20.09.2015 ರಂದು ಮದ್ಯಾಹ್ನ 01.30 ಗಂಟೆಗೆ ಸರಕಾರಿ ಆಸ್ಪತ್ರೆ ಸೇಡಂ ಮರ್ಚರಿ

ಕೋಣೆಯಲ್ಲಿ ಮೃತ ದೇಹವನ್ನು ಶವದ ಮಹಜರ ಪಂಚನಾಮೆ ಜರುಗಿಸಲು ಪೊಲೀಸರು ನನ್ನನ್ನು ಬರಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲೆಗೆ ಸಹಿ ಮಾಡಿಲ್ಲ. ನನ್ನ ಸಮಕ್ಷಮ ಯಾವುದೇ ಶವದ ಪಂಚನಾಮೆ ಜರುಗಿಸಿಲ್ಲ. ನಿಪಿ–2 ಕ್ಕೆ ಸಹಿ ಮಾಡಿದ್ದರೂ ಸಹಿ ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಶವದ ಪಂಚನಾಮೆ ಮಾಡಿದ್ದರೂ, ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಪರಿಚಯ ಇದ್ದರೂ, ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಜೊತೆ ರಾಜೀ ಮಾಡಿಕೊಂಡು ಅವನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಎ. ಎಮ್. ಆರೋಪಿ ಪರ ವಕೀಲರಿಂದ</u>**

ಏನು ಇಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)　　　　ಓ. ಹೇ. ಕೇ. ಸರಿ ಇದೆ.

ಪ್ರ.ದ.ನ್ಯಾದಂ.ಸೇಡಂ.

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ. ಸಿ. ನಂ.769/2015

ಸಿಡಬ್ಲ್ಯೂ-7 ಪಿಡಬ್ಲ್ಯೂ-5

| | |
|---|---|
| ಹೆಸರುಃ | ಮಾರುತಿ |
| ತಂದೆಯ ಹೆಸರುಃ | ಬಸಣ್ಣ |
| ವಯಸ್ಸುಃ | 40 ವರ್ಷ |
| ಉದ್ಯೋಗಃ | ಕೂಲಿ ಕೆಲಸ |
| ವಾಸ ಸ್ಥಳಃ | ಸೇಡಂ |

ದಿನಾಂಕ 21-08-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಮೃತ ಅಭೀಲಾಶ ಯಾರೆಂದು ನನಗೆ ಗೊತ್ತಿಲ್ಲ. ಅವರು ಹೇಗೆ ತೀರಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ಆರೋಪಿಯ ಪರಿಚಯ ಇಲ್ಲ. ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ನಾನು ಯಾವುದೇ ಘಟನೆ ನೋಡಿಲ್ಲ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿ. 20-09-2018 ರಂದು ಕೆಲಸ ಮುಗಿಸಿಕೊಂಡು ಗ್ಯಾರೇಜ್ ಮುಚ್ಚಿಕೊಂಡು ಎದುರುಗಡೆ ಆಕಾಶ್ ಡಾಬಾ ಹತ್ತಿರ ರಾತ್ರಿ 09-00 ಗಂಟೆ ಸುಮಾರಿಗೆ ವಾಸುದೇವ ಇವರ ಮಗನಾದ ಅಭಿಲಾಶ್ ಕೂಡಿಸಿದ ಗಣೇಶನ ಮೂರ್ತಿಯನ್ನು ದರ್ಶನ ಮಾಡಲು ಹೋಗಿದ್ದು ಇತ್ತು ಎಂದರೆ ಗೊತ್ತಿಲ್ಲ. ಸೇಡಂ ಕೊಡಂಗಲ್ ಮೇನ್ ರೋಡ್ ದಾಟಿ ತಮ್ಮ ಮನೆಗೆ ಹೋಗುವಾಗ ಎ ಪಿ ಎಫ್ ಫ್ಯಾಕ್ಟರಿ ಕಡೆಯಿಂದ ರಾಹುಲ್ ತಂದೆ ಶಂಕರ್ ಆರೋಪಿ ತನ್ನ ವಶದಲ್ಲಿದ್ದ ಮೋಟಾರು ಸೈಕಲ್ ಸಂಖ್ಯೆ ಕೆ ಎ 34 ವಿ 4108 ನೇಯ್ದನ್ನು ಅತಿವೇಗ ಹಾಗೂ ನಿಶ್ಕಾಳಜಿಯಿಂದ ಚಲಾಯಿಸಿಕೊಂಡು ಬಂದು ರೋಡು ದಾಟುತ್ತಿದ್ದ ಅಭಿಲಾಶ್ ಗೆ ಡಿಕ್ಕಿ ಪಡಿಸಿದ್ದರು ಎಂದರೆ ಸರಿಯಲ್ಲ. ಹಾಗೆ ಡಿಕ್ಕಿ ಪಡಿಸಿದ್ದರಿಂದ ಅಭಿಲಾಶ್ ಈತನ ತಲೆಯ ಎಡ ಗಡೆಗೆ ಭಾರಿ ರಕ್ತಗಾಯವಾಗಿ , ಕಿವಿ ಯಿಂದ ರಕ್ತಸ್ರಾವ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಅಪಘಾತದ ವಿಷಯ ತಿಳಿದು ಚಾ ಸಾ 1,4,5 ರವರು ಅಪಘಾತ ಸ್ಥಳಕ್ಕೆ ಬಂದು ಆತನಿಗೆ ಭಾರಿ ರಕ್ತಗಾಯ ವಾಗಿದ್ದರಿಂದ ಮಾತನಾಡುವ ಸ್ಥಿತಿಯಲ್ಲಿಲ್ಲದ ಕಾರಣ ಉಪಚಾರಕ್ಕೆಂದು ಬೇರೆ ವಾಹನದಲ್ಲಿ ಹಾಕಿಕೊಂಡು ಸೇಡಂ ಆಸ್ಪತ್ರೆಗೆ ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ಸದರಿ ಆಸ್ಪತ್ರೆಯಲ್ಲಿ ವೈದ್ಯರು ಹೆಚ್ಚಿನ ಚಿಕಿತ್ಸೆಗಾರಿ ಹೋಗಬೇಕೆಂದು ತಿಳಿಸಿದ್ದರಿಂದ, ಆಂಬ್ಯೂಲೆನ್ಸ್ ನಲ್ಲಿ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಅಭಿಲಾಶನ್ನು ಮೃತಪಟ್ಟಿರುತ್ತಾನೆ ಎಂದರೆ ಗೊತ್ತಿಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ 3 ಎಂದು ಗುರತಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ  ಆರೋಪಿ ಪರ ವಕೀಲರಿಂದಃ ಇಲ್ಲ ಎನ್ನುತ್ತಾರೆ.</u>**

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಪ್ರ.ದ.ನ್ಯಾದಂ.ಸೇಡಂ.

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ. ಸಿ. ನಂ.769/2015

ಸಿಡಬ್ಲ್ಯೂ-5 ಪಿಡಬ್ಲ್ಯೂ-6

| | |
|---|---|
| ಹೆಸರುಃ | ಶೋಭಾ |
| ಗಂಡನ ಹೆಸರುಃ | ತಿಪ್ಪಣ್ಣ |
| ವಯಸ್ಸುಃ | 35 ವರ್ಷ |
| ಉದ್ಯೋಗಃ | ಖಾಸಗಿ ಕೆಲಸ |
| ವಾಸ ಸ್ಥಳಃ | ಸೇಡಂ |

ದಿನಾಂಕ 21-08-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಮೃತ ಅಭೀಲಾಶ ನನ್ನ ಅಳಿಯ. ಆರೋಪಿ ನನಗೆ ಗೊತ್ತು. ಅವರೇ ಅಪಘಾತ ಪಡಿಸಿರುತ್ತಾರೆ. ಈಗ 9 ವರ್ಷದ ಕೆಳಗೆ ಅಪಘಾತ ಆಗಿ ತೀರಿಕೊಂಡಿದ್ದಾರೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿ ಅಪಘಾತ ಪಡಿಸಿದ್ದಾರೆ. ಹೂಡಗಿ ರೋಡ್ ನ ಪೆಟ್ರೋಲ್ ಬಂಕ್ ಹತ್ತಿರ ಅಪಘಾತ ಆಗಿದೆ. ಅಪಘಾತ ಆಗಿದ್ದನ್ನು ನಾನು ನೋಡಿದ್ದೇನೆ. ವಾಹನ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ನನ್ನ ಅಳಿಯ ಪ್ರಸಾದ ತೆಗೆದುಕೊಂಡು ಹೋಗುವಾ ಆರೋಪಿ ಹಿಂದೆಯಿಂದ ಬಂದು ಅಪಘಾತ ಪಡಿಸಿರುತ್ತಾರೆ. ಅಪಘಾತ ಆದ ಕಾರಣ ತಲೆಗೆ ಭಾರಿ ಪೆಟ್ಟಾಗಿರುತ್ತದೆ. ನಾನು ನನ್ನ ಅಳಿಯನನ್ನು ಕರೆದುಕೊಂಡು ಆಸ್ಪತ್ರೆಗೆ ಸೇಡಂ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ವೈದ್ಯರು ನನ್ನ ಅಳಿಯನಿಗೆ ತಲೆಗೆ ಭಾರಿ ಪೆಟ್ಟಾಗಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಗೆ ಕರೆದುಕೊಂಡು ಹೋಗುವಾಗ ತೇಗಳಿ ಕ್ರಾಸ್ ಹತ್ತಿರ ದಾರಿ ಮಧ್ಯದಲ್ಲಿ ತೀರಿ ಹೋಗಿರುತ್ತಾರೆ. ಆರೋಪಿಯ ತಪ್ಪಿನಿಂದ ಅಪಘಾತ ಆಗಿದೆ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿ.20-09-2015 ರಂದು ರಾತ್ರಿ 09-15 ಕ್ಕೆ ಜಿ ಕೆ ಕ್ರಾಸ್ ಹತ್ತಿರ ಸೇಡಂ ಕೊಡಂಗಲ್ ಮೇನ್ ರೋಡ್ ದಾಟುವಾಗಿ ವಿ ಸಿ ಎಫ್ ಪ್ಯಾಕ್ಟರಿ ಕಡೆಯಿಂದ ಆರೋಪಿತನು ತನ್ನ ವಶದಲ್ಲಿದ್ದ ಮೊಟಾರು ಸೈಕಲ್ ನಂ. ಕೆ ಎ 34 ವಿ 4108 ನೇದ್ದನ್ನು ಅತಿವೇಗ ಮತ್ತು ನಿಶ್ಕಾಳಜಿಯಿಂದ ಚಲಾಯಿಸಿಕೊಂಡು ಬಂದು ರೋಡು ದಾಟುತ್ತಿದ್ದ ಅಭಿಲಾಶ್ ಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ  ಎ ಎಂ ಆರೋಪಿ ಪರ ವಕೀಲರಿಂದಃ**

ಘಟನೆ ನಡೆದ ಸಮಯದಲ್ಲಿ ನಮ್ಮದು ಖಾನಾವಳಿ ಇತ್ತು ಎಂದರೆ ಸರಿ. ಖಾನಾವಳಿ ಇದ್ದ ಕಾರಣ ಗಿರಾಕಿಗಳು ಹೋಗಿ ಬರುತ್ತಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಘಟನೆ ಆದ ಸಮಯದಲ್ಲಿ ನಾನು ಖಾನಾವಳಿ ಒಳಗೆ ಇದ್ದೆ ಎಂದು ನುಡಿಯುತ್ತಾರೆ. ಒಳಗೆ ಇದ್ದ ಕಾರಣ ವಾಹನಗಳು ಒಡಾಡುವುದು ನನಗೆ ಕಾಣುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳ ಮುಖ್ಯ ರಸ್ತೆಯಾದ ಕಾರಣ ಅಕ್ಕ ಪಕ್ಕದಲ್ಲಿ ವಾಹನಗಳು ಸಾಕಷ್ಟು ಇರುತ್ತವೆ ಎಂದರೆ ಸರಿ. ಸಮಾನ್ಯವಾಗಿ ಮುಖ್ಯ ರಸ್ತೆಯಾದ ಕಾರಣ ವಾಹನಗಳು ನಿಧಾನವಾಗಿ ಹೋಗುತ್ತವೆ ಎಂದರೆ ಸರಿ. ಪೆಟ್ರೋಲ್ ಬಂಕ್ ಹತ್ತಿರ ಸ್ಪಿಡ್ ಬ್ರೇಕರ್ ಇದೆ ಎಂದರೆ ಸರಿ. ಆದ್ದರಿಂದ ಯಾವುದೇ ವಾಹನಗಳು ಹೋದರು ನಿಧಾನವಾಗಿ ಹೋಗುತ್ತವೆ ಎಂದರೆ ಸರಿ. ಮುಖ್ಯ ರಸ್ತೆಯಾದ ಕಾರಣ ಗುನ್ಹಾ ಸ್ಥಳದಲ್ಲಿ ಅಕ್ಕ ಪಕ್ಕದಲ್ಲಿ ಅಂಗಡಿಗಳು ಇವೆ ಎಂದರೆ ಸರಿ ಮತ್ತು ಪೆಟ್ರೋಲ್ ಬಂಕ್ ಇದ್ದ ಕಾರಣ ಸಾಕಷ್ಟು ವಾಹನಗಳು ನಿಂತಿರುತ್ತವೆ ಎಂದರೆ ಸರಿ. ಗಣಪತಿಯನ್ನು ಉತ್ತರ ದಿಕ್ಕಿಗೆ ಕೂರಿಸಿದ್ದರು ಎಂದರೆ ಸರಿ. ಅದರ ಅಕ್ಕ ಪಕ್ಕ ಲಾರಿಗಳು ನಿಲ್ಲುತ್ತವೆ ಎಂದರೆ ಸರಿ. ಲಾರಿಗಳು ನಿಲ್ಲುವ ಕಾರಣ ರಸ್ತೆದಾಟುವವರಿಗೆ ವಾಹನಗಳು ಬರುವುದು ಕಾಣುವುದಿಲ್ಲ ಎಂದರೆ ಸರಿಯಲ್ಲ.

ಹೂಡಗಿ ರೋಡ್ ನ ಪೆಟ್ರೋಲ್ ಬಂಕ್ ಹತ್ತಿರ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತ ಆಗಿದ್ದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ವಾಹನ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ನನ್ನ ಅಳಿಯ ಪ್ರಸಾದ ತೆಗೆದುಕೊಂಡು ಹೋಗುವಾಗ  ಆರೋಪಿ ಹಿಂದೆಯಿಂದ ಬಂದು ಅಪಘಾತ ಪಡಿಸಿಲ್ಲ ಎಂದರೆ ಸರಿಯಲ್ಲ.  ಅಪಘಾತ ಆದ ಕಾರಣ ತಲೆಗೆ ಭಾರಿ ಪೆಟ್ಟಾಗಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಅಳಿಯನನ್ನು ಕರೆದುಕೊಂಡು ಆಸ್ಪತ್ರೆಗೆ ಸೇಡಂ ಸರ್ಕಾರಿ ಆಸ್ಪತ್ರೆಗೆ ಹೋಗಿಲ್ಲಎಂದರೆ ಸರಿಯಲ್ಲ. ಆರೋಪಿಗೂ ಘಟನೆಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಖಾನಾವಳಿಯ ಒಳಗೆ ಇದ್ದ ಕಾರಣ ಅಪಘಾತವನ್ನು ನೋಡಿಲ್ಲ ಎಂದರೆ ಸರಿಯಲ್ಲ. ನನ್ನ ಅಳಿಯ ತೀರಿಹೋಗಿದ್ದರಿಂದ ವಿಮೆ ಹಣ ಬಂದಿದೆ. ಮೃತನು ನನ್ನ ಅಣ್ಣನ ಮಗ ಆದ ಕಾರಣ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)　　　　ಓ. ಹೇ. ಕೇ. ಸರಿ ಇದೆ.

ಪ್ರ.ದ.ನ್ಯಾದಂ.ಸೇಡಂ.

*Accused is present.*
*CW-7 and are examined as PW-5 and 6 and got marked Ex.P.3*
*Counsel for accused submits no cross examination with respect to PW-5 and fully cross examined PW-6.*
*Reissue W/s to CW-8 to 12.*
*Call on 11-09-2024*

*JMFC., Sedam.*